


**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿ–ರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂಪುಟ 13, ಸಂಚಿಕೆ 2 ದ್ವೈಮಾಸಿಕ ವಾರ್ತಾಪತ್ರ ಮಾರ್ಚ್–ಏಪ್ರಿಲ್ 2025

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಮೇ 13, 2012)

**ಅನು: ಕಾಂಚನಲತಾ**

ನನ್ನ ಭೌತಿಕ ಮಹತ್ವಾಕಾಂಕ್ಷೆಗಳನ್ನು ಸಾಧಿಸಲು ಬೆಳಕು ಸಹಾಯ ಮಾಡುತ್ತದೆಯೇ?

ಖಂಡಿತಾ ಹೌದು. ನಿಮ್ಮ ಭೌತಿಕ ಅಥವಾ ಆಧ್ಯಾತ್ಮಿಕ ಮಹತ್ವಾಕಾಂಕ್ಷೆಗಳನ್ನು ಸಾಕಾರಗೊಳಿಸಲು ಬೆಳಕು ಸಹಾಯ ಮಾಡುತ್ತದೆ, ಆದರೆ ನೀವು ಪ್ರಯತ್ನಗಳನ್ನು ಮಾಡಬೇಕು. ಪ್ರಯತ್ನಗಳಿಲ್ಲದೆ ನಾವು ಏನನ್ನೂ ಸಾಧಿಸಲು ಸಾಧ್ಯವಿಲ್ಲ. ನೀವು ಬೆಳಕನ್ನು ಒಯ್ಯಬಹುದು ಮತ್ತು ಬೆಳಕನ್ನು ಕಳುಹಿಸಬಹುದು, ಆದರೆ ನೀವು ಪ್ರಯತ್ನಗಳನ್ನು ಮಾಡಬೇಕು.

ಬೆಳಕು ಯಾವುದೇ ಮಹತ್ವಾಕಾಂಕ್ಷೆಯನ್ನು ಪೂರೈಸಲು ಸಹಾಯ ಮಾಡುತ್ತದೆ, ಆದರೆ ನಾವು ವಿವೇಚನೆಯಿಂದ ಇರಬೇಕು. ನಾವು ಅವಾಸ್ತವಿಕ ಮಹತ್ವಾಕಾಂಕ್ಷೆಗಳನ್ನು ಹೊಂದಿರಬಾರದು. ಮತ್ತು ನಿಮ್ಮ ಭೌತಿಕ ಮಹತ್ವಾಕಾಂಕ್ಷೆಗಳು ನಿಮ್ಮ ಆಧ್ಯಾತ್ಮಿಕ ಗುರಿಗಳಿಗೆ ಅಡ್ಡವಾಗಿ ಬರಬಾರದು. ಅದೇ ಸಮಯದಲ್ಲಿ, ನಿಮ್ಮ ಆಧ್ಯಾತ್ಮಿಕ ಮಹತ್ವಾಕಾಂಕ್ಷೆಗಳು ನಿಮ್ಮ ಭೌತಿಕ ಗುರಿಗಳಿಗೆ ಅಡ್ಡವಾಗಿ ಬರಬಾರದು.

ಭೌತಿಕ ಮತ್ತು ಆಧ್ಯಾತ್ಮಿಕ ಗುರಿಗಳೆರಡೂ ಮುಖ್ಯವಾದವುಗಳೇ. ನೀವು ಭೌತಿಕ ಜೀವನದಲ್ಲಿ ಯಶಸ್ವಿಯಾದಾಗ ಮಾತ್ರ ಆಧ್ಯಾತ್ಮಿಕ ಜೀವನದಲ್ಲಿ ಯಶಸ್ವಿಯಾಗುವಿರಿ. ಅಂತೆಯೇ, ನೀವು ಆಧ್ಯಾತ್ಮಿಕ ಜೀವನದಲ್ಲಿ ಯಶಸ್ವಿಯಾದಾಗ ಮಾತ್ರ ಭೌತಿಕ ಜೀವನದಲ್ಲಿ ಯಶಸ್ವಿಯಾಗುತ್ತೀರಿ.

ನೀವು ನಿಮ್ಮ ಆಧ್ಯಾತ್ಮಿಕ ಮತ್ತು ಭೌತಿಕ ಜೀವನದ ನಡುವೆ ಸಮತೋಲನವನ್ನು ಸಾಧಿಸಬೇಕು. ನೀವು ಇವೆರಡರಲ್ಲಿ ಒಂದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಆಧ್ಯಾತ್ಮಿಕತೆಯು ಈ ಜೀವನವನ್ನು ಬಹಳ ವಿವೇಚನೆಯಿಂದ ನಡೆಸುವುದಾಗಿದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಶ್ರೇಷ್ಠ ಆರಂಭಗಳು ಯಾವಾಗಲೂ ಸಾಧಾರಣವಾಗಿರುತ್ತವೆ ಎಂದು ಹೇಳಲಾಗುತ್ತದೆ. ಹಲವು ವರ್ಷಗಳ ಹಿಂದೆ ನಾವು ವಿಶ್ವ ಚಾನಲ್ಸ್ ದಿನವನ್ನು ಆಚರಿಸಲು ಪ್ರಾರಂಭಿಸಿದಾಗ, ನಮ್ಮ ಆಚರಣೆಯಲ್ಲಿ ಒಂದು ದಿನ ಲಕ್ಷಾಂತರ ಜನರು ನಮ್ಮೊಂದಿಗೆ ಸೇರುತ್ತಾರೆ ಎಂದು ನಾವು ಊಹಿಸಿರಲಿಲ್ಲ.

ಎಲ್ಲಾ ಜನರು ಪರಿಪೂರ್ಣ ಸಾಮರಸ್ಯದಿಂದ ಬದುಕುವುದನ್ನು ನೋಡುವುದು ನಮ್ಮ ಕನಸು. ಇದು ನಿಜವಾಗಿಯೂ ಸಾಧ್ಯವೇ? ಇದು ಸಾಧ್ಯ ಎಂದು ನಾವು ಮಹಾನ್ ಮಾಸ್ಟರ್‌ಗಳಿಂದ ಕಲಿತಿದ್ದೇವೆ. ಸಾವಿರಾರು ವರ್ಷಗಳ ಹಿಂದೆ ಜನರು ಪರಿಪೂರ್ಣ ಸಾಮರಸ್ಯದಿಂದ ಬದುಕಿದ್ದರು. ನಾವು ಈ ಜಗತ್ತಿನಲ್ಲಿ ಮತ್ತೆ ಅದೇ ಸಾಮರಸ್ಯ ಮತ್ತು ಶಾಂತಿಯನ್ನು ಸ್ಥಾಪಿಸಬಹುದು. ಲೈಟ್ ಚಾನೆಲಿಂಗ್ ಅಭ್ಯಾಸ ಮತ್ತು ಸಕಾರಾತ್ಮಕವಾದ ಜೀವನ ಇದಕ್ಕೆ ಸಹಾಯ ಮಾಡುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಕಾಂಚನಲತಾ**

15ನೇ ವಿಶ್ವ ಚಾನಲ್ಸ್ ದಿನವು ಮಾನಸ ಕುಟುಂಬಕ್ಕೆ ಒಂದು ಸ್ಮರಣೀಯ ಅನುಭವವಾಗಿತ್ತು. ನೂರಕ್ಕೂ ಹೆಚ್ಚು ಕಾರ್ಯಕರ್ತರು, ಜಗತ್ತಿಗೆ ಬೆಳಕನ್ನು ಕೆಳಗೆ ತರುವ ಏಕೈಕ ಉದ್ದೇಶದಿಂದ ಕೆಲಸ ಮಾಡಿದರು. ಕೆಲವರು ಮುಂಚೂಣಿಯಲ್ಲಿ ಕೆಲಸ ಮಾಡಿದರೆ, ಮತ್ತೆ ಕೆಲವರು ತೆರೆಮರೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಪ್ರತಿಯೊಂದು ಕೊಡುಗೆಯೂ, ಎಷ್ಟೇ ಚಿಕ್ಕದಿರಲಿ ಅಥವಾ ದೊಡ್ಡದಿರಲಿ, ಈ ಕಾರ್ಯಕ್ರಮ ಯಶಸ್ವಿಗೊಳ್ಳುವಲ್ಲಿ ಮಹತ್ತರವಾದ ಪಾತ್ರ ವಹಿಸಿತು.

ವಿಶ್ವ ಚಾನೆಲ್ ದಿನದಂದು, 7 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ವಯಸ್ಕರು ಲೈಟ್ ಚಾನೆಲ್ ಮಾಡಿದರು. ಕೆಲವು ಸ್ಥಳಗಳಲ್ಲಿ, ಜನರು ಸಣ್ಣ ಗುಂಪುಗಳಲ್ಲಿ ಒಟ್ಟುಗೂಡಿ ನಮ್ಮ ಆನ್‌ಲೈನ್ ಸೆಷನ್‌ನಲ್ಲಿ ಭಾಗವಹಿಸಿದರು. ಪ್ರತಿ ಸಣ್ಣ ಕ್ರಿಯೆಯೂ ದೊಡ್ಡ ಪರಿಣಾಮದಲ್ಲಿ ಸೇರಿಕೊಳ್ಳುತ್ತದೆ ಎಂದು ನನಗೆ ಅನಿಸುತ್ತದೆ! ಅಮೇರಿಕದ ನಾಟಕಕಾರ ಮತ್ತು ತತ್ವಜ್ಞಾನಿಯಾದ ಹೊವಾರ್ಡ್ ಜಿನ್ (1922–2010), ಸುಂದರವಾಗಿ ಉಲ್ಲೇಖಿಸಿದ್ದಾರೆ, "ಸಣ್ಣ ಕ್ರಿಯೆಯಲ್ಲಿ, ಲಕ್ಷಾಂತರ ಜನರು ಪಾಲ್ಗೊಂಡಾಗ ಜಗತ್ತನ್ನು ಪರಿವರ್ತಿಸಬಹುದು." ಈ ಜಗತ್ತನ್ನು ವಾಸಿಸಲು ಉತ್ತಮ ಸ್ಥಳವನ್ನಾಗಿ ಮಾಡಲು ನಾವೆಲ್ಲರೂ ನಮ್ಮ ಪಾಲಿನದನ್ನು ಮಾಡೋಣ.

**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು–560077, ಭಾರತ.

ಫೋನ್: 99000 75280 (10am to 5pm), ಇ–ಮೇಲ್: info@lightagemasters.com

website: www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

**ಅನು: ಕಾಂಚನಲತಾ**

- ನಾವೆಲ್ಲರೂ ಜಾಗೃತರಾಗುವ ಸಾಮರ್ಥ್ಯವನ್ನು ಹೊಂದಿದ್ದೇವೆ. ಬಿಡುಗಡೆಯಾಗುತ್ತಿರುವ ಹೊಸ ಚೈತನ್ಯಗಳು ನಮ್ಮ ಜಾಗೃತಿಗೆ ಅಗತ್ಯವಾದ ಪರಿಸ್ಥಿತಿ–ಗಳನ್ನು ಸೃಷ್ಟಿಸುತ್ತವೆ. ಅವು ನಮ್ಮನ್ನು ತಾವಾಗಿಯೇ ಜಾಗೃತಗೊಳಿಸುವುದಿಲ್ಲ. ನಾವು ಪ್ರಯತ್ನಗಳನ್ನು ಮಾಡಬೇಕು.
- ನಾವು ಇನ್ನೂ ಕಲಿಯುಗದಿಂದ ಬೆಳಕಿನ ಯುಗಕ್ಕೆ ಬದಲಾಗುವ ಪರಿವರ್ತನೆಯ ಕಾಲದಲ್ಲಿದ್ದೇವೆ ಎಂಬುದನ್ನು ಅರಿತುಕೊಳ್ಳೋಣ. ನಾವು ತುಂಬಾ ಕಷ್ಟದ ಸಮಯದಲ್ಲಿ ಬದುಕುತ್ತಿದ್ದೇವೆ ಮತ್ತು ಅಪೂರ್ಣರಾಗಿದ್ದೇವೆ ಎಂದು ಒಪ್ಪಿಕೊಳ್ಳಲು ಸಾಧ್ಯವಾದರೆ, ನಮಗೆ ಅಪಾರ ತಾಳ್ಮೆ ಇರುತ್ತದೆ.
- ಧ್ಯಾನ ಮಾಡಿ ನಿಶ್ಚಲತೆಯ ಸ್ಥಿತಿಯನ್ನು ತಲುಪಿದಾಗ, ನಾವು ಜಾಗರೂಕರಾಗಿದ್ದರೆ, ಭಗವಂತನ ಇರುವಿಕೆಯ (Presence) ಬಗ್ಗೆ ಅರಿತುಕೊಳ್ಳುತ್ತೇವೆ. ನಾವು ಧ್ಯಾನ ಮಾಡದಿದ್ದರೂ ಸಹ, ನಮ್ಮ ಅರಿವನ್ನು ವಿಸ್ತರಿಸಿದರೆ ಅಥವಾ ಬದಲಾಯಿಸಿದರೆ, ಈ ಇರುವಿಕೆಯ ಅರಿವುಂಟಾಗುತ್ತದೆ. ಈ ಇರುವಿಕೆಯಲ್ಲಿ ಎಲ್ಲವೂ ಇವೆ – ಪ್ರೀತಿ, ಶಾಂತಿ, ಆನಂದ ಮತ್ತು ನಮ್ಮ ಬಗೆಗಿನ ಕಾಳಜಿ.
- ಈ ಭೂಮಿಯಲ್ಲಿ ಎಲ್ಲವೂ ಏರುಪೇರಾಗುತ್ತವೆ; ಯಾವುದೂ ಸ್ಥಿರವಾಗಿಲ್ಲ. ನಾವು ಹಗಲು ಮತ್ತು ರಾತ್ರಿಗಳನ್ನು ಹೊಂದಿರುವಂತೆ ಧ್ಯಾನಗಳು ಏರಿಳಿತಗಳನ್ನು ಹೊಂದಿವೆ. ಒಂದೇ ಬಗೆಯ ಪ್ರಯತ್ನ ಪಟ್ಟರೂ, ಕೆಲವೊಮ್ಮೆ ಧ್ಯಾನಗಳು ತೃಪ್ತಿಕರವಾಗುವುದಿಲ್ಲ. ಇದು ಬಾಹ್ಯ ಕಾರಣಗಳಿಂದಾಗಿ ಸಂಭವಿಸುತ್ತದೆ.
- ಆಧ್ಯಾತ್ಮಿಕ ಜಾಗೃತಿಯು ಒಂದು ನಿರಂತರ ಪ್ರಕ್ರಿಯೆಯಾಗಿದೆ. ಒಬ್ಬ ವ್ಯಕ್ತಿಯು ಉನ್ನತ ವಾಸ್ತವಕ್ಕೆ ಜಾಗೃತನಾಗುತ್ತಾನೆ. ಆತನು ಇನ್ನೂ ಉನ್ನತ ವಾಸ್ತವಕ್ಕೆ ಜಾಗೃತಿ ಹೊಂದಲು ತನ್ನ ಸಾಧನೆಯನ್ನು ಮುಂದುವರೆಸುತ್ತಾನೆ. ನಾವು ನಮ್ಮ ಮೂಲಕ್ಕೆ ಹಿಂದಿರುಗುವವರೆಗೂ ಜಾಗೃತಿಗೊಳ್ಳುವ ಪ್ರಕ್ರಿಯೆಯು ಮುಂದುವರೆಯುತ್ತದೆ.
- ಜೀವ–ಶಕ್ತಿಯು ಚೇತನವನ್ನು ಕೇವಲ ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ಮಾತ್ರ ತುಂಬುವುದಿಲ್ಲ, ಇಡೀ ಸೃಷ್ಟಿಯಲ್ಲಿ ತುಂಬುತ್ತದೆ. ಜೀವ–ಶಕ್ತಿಯು ಜೀವನದ ವೈರುಧ್ಯಗಳ ವಿರುದ್ಧ ಹೋರಾಡಲು ಮತ್ತು ಜೀವನವನ್ನು ಮುಂದುವರೆಸಲು ನಮಗೆ ಭರವಸೆ ಮತ್ತು ಶಕ್ತಿಯನ್ನು ನೀಡುತ್ತದೆ.
- ನಮಗೆ ಯಾವುದು ಒಳ್ಳೆಯದು ಎಂದು ತಿಳಿಯಲು, ನಾವು ನಮ್ಮ ಅರಿವನ್ನು ಸ್ಥಿತ್ಯಂತರಗೊಳಿಸಿಕೊಂಡು, ವಿಶ್ವದೊಂದಿಗೆ ಅಥವಾ ಭಗವಂತನ ಇರುವಿಕೆಯೊಂದಿಗೆ (Presence) ವ್ಯವಹರಿಸಬೇಕು. ವಿಶ್ವವು ನಮಗೆ ಮಾರ್ಗದರ್ಶನ ನೀಡಲು, ಸಂತೈಸಲು ಮತ್ತು ಸಮೃದ್ಧಿಯನ್ನು ನೀಡಲು ಕಾದಿರುತ್ತದೆ. ಒಮ್ಮೆ ನಾವು ವಿಶ್ವದೊಂದಿಗೆ ಸಂಪರ್ಕ ಸಾಧಿಸಿದರೆ ಮತ್ತು ಕಣ್ಣುಮುಚ್ಚಿ ನಂಬಿದರೆ, ನಮ್ಮ ಜೀವನವು ಬದಲಾಗುತ್ತದೆ.
- ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಕರ್ಮದ ಹೊರೆಯನ್ನು ಹೊತ್ತಿರುತ್ತಾನೆ. ಕಲಿಯಲು ಅವಕಾಶಗಳನ್ನು ನೀಡುವ ತನ್ನ ಕರ್ಮಗಳನ್ನು ಆ ವ್ಯಕ್ತಿಯು ಅನುಭವಿಸಲೇಬೇಕು.
- ಕೆಲವು ವ್ಯಕ್ತಿಗಳು ಸದಾ ಒಳ್ಳೆಯವರಾಗಿ ವರ್ತಿಸಲು ಪ್ರಯತ್ನಿಸುತ್ತಾರೆ; ಅದರಲ್ಲೇನೂ ತಪ್ಪಿಲ್ಲ ಆದರೆ ಪ್ರಾಮಾಣಿಕವಾಗಿ ಒಳ್ಳೆಯವರಾಗಿರಬೇಕು. ಅದು ಕೃತಕವಾಗಿರಬಾರದು. ಒಳ್ಳೆಯತನವು ನಮ್ಮ ಮನದಾಳದಿಂದ, ಹೃದಯದಿಂದ ಬರಬೇಕು.


–ಗುರೂಜಿ ಕೃಷ್ಣಾನಂದ



ಕರ್ನಾಟಕ ಹಾಗೂ ಮಹಾರಾಷ್ಟ್ರದ ಅನೇಕ ಶಾಲೆಗಳ ವಿದ್ಯಾರ್ಥಿಗಳು 15ನೇ ವಿಶ್ವ ಚಾನಲ್ಸ್ ದಿನವಾದ ಜನವರಿ 31, 2025ರಂದು ಲೈಟ್ ಚಾನಲ್ ಮಾಡುತ್ತಿರುವುದು.



ಪುಣೆಯ ಶಾಲೆಯೊಂದರ ವಿದ್ಯಾರ್ಥಿಗಳು 15ನೇ ವಿಶ್ವ ಚಾನಲ್ಸ್ ದಿನವಾದ ಜನವರಿ 31, 2025ರಂದು ಮಾರ್ಗದರ್ಶಿತ ಆನ್‌ಲೈನ್ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.



15ನೇ ವಿಶ್ವ ಚಾನಲ್ಸ್ ದಿನದ ಯಶಸ್ವಿನ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ ಕಾರ್ಯಕರ್ತರು

# 15ನೇ ವಿಶ್ವ ಚಾನಲ್ಸ್ ದಿನದ ವರದಿ

ಮನೋಜ್ ಚೋಪ್ರಾ; ಅನು: ಕಾಂಚನಲತಾ

15ನೇ ವಿಶ್ವ ಚಾನಲ್ಸ್ ದಿನವು ನಮ್ಮ ಕನಸು ನನಸಾದ ರೀತಿಯ ದಿನ! ಗುರೂಜಿ ಕೃಷ್ಣಾನಂದರವರು ಹೇಳುತ್ತಿದ್ದರು, ಸಮಯವು ಹಾರಿ ಹೋಗುತ್ತದೆ, ಎಂದು. ಅವರ ಮಾತುಗಳು ಅದೆಷ್ಟು ನಿಜ! ನೆನ್ನೆಯಷ್ಟೇ ನಮ್ಮ ಪಯಣವನ್ನು ಆರಂಭಿಸಿದ ಹಾಗೆ ಇದೆ. ಲೈಟ್ ಚಾನಲ್ಸ್ ವಿಶ್ವ ಸಂಚಲನ ಮೇ 2008ರಲ್ಲಿ ಆರಂಭವಾಯಿತು ಹಾಗೂ ನವೆಂಬರ್ 2009ರಲ್ಲಿ ಗುರೂಜಿಯವರು ಒಂದು ತಂಡವನ್ನು ರಚಿಸಿದರು ಮತ್ತು ನಮಗೆ ಶಾಲೆಗಳನ್ನು ಮತ್ತು ಇನ್ನಿತರ ಸ್ಥಳಗಳನ್ನು ಭೇಟಿ ಮಾಡಲು ನಿರ್ದೇಶನ ನೀಡಿದರು. 2011ರಲ್ಲಿ ನಾವು ವಿಶ್ವ ಚಾನಲ್ಸ್ ದಿನವನ್ನು ಆಚರಿಸಲು ಆರಂಭಿಸಿದೆವು. ಹದಿನಾರು ವರ್ಷಗಳ ಈ ಪಯಣವು, ನಮಗೆ ಮರೆಯಲಾಗದಂತಹ ಅದ್ಭುತವಾದ ನೆನಪುಗಳನ್ನು ನೀಡಿದೆ.

ಪ್ರತಿ ವಿಶ್ವ ಚಾನಲ್ಸ್ ದಿನವೂ ನಮಗೊಂದು ಭಾವನಾತ್ಮಕವಾದ ಘಟನೆಯಾಗಿರುತ್ತದೆ. ಆ ದಿನ ಚಾನಲ್ ಮಾಡಿದ ಬೆಳಕು ನಮ್ಮ ಪ್ರೀತಿಯ ಮಾಸ್ಟರ್ ಅಮರ ಮಹರ್ಷಿಯವರಿಗೆ ಜನ್ಮ ದಿನದ ಉಡುಗೊರೆಯಾಗಿದೆ. ಈ ದಿನಕ್ಕೆ ಸುಮಾರು ಎರಡು ತಿಂಗಳ ಮೊದಲೇ ಮಾನಸದ ಸಮಗ್ರ ಕುಟುಂಬವು ಈ ವಿಶೇಷ ಕಾರ್ಯಕ್ರಮಕ್ಕೆ ಸಜ್ಜುಗೊಳ್ಳಲಾರಂಭಿಸುತ್ತದೆ. ಅತಿ ಹೆಚ್ಚು ಬೆಳಕನ್ನು ಕೆಳತರಬೇಕೆನ್ನುವ ಗುರಿಯನ್ನಿಟ್ಟುಕೊಂಡು ನಮ್ಮ ಕಾರ್ಯಕರ್ತರು ಅತ್ಯುತ್ಸಾಹದಿಂದ ಕಾರ್ಯ ಪ್ರಾರಂಭಿಸುತ್ತಾರೆ. ನಮ್ಮ ವಿವಿಧ ಪ್ರದೇಶಗಳ ಸಂಯೋಜಕರು ಆಯೋಜನೆಯಲ್ಲಿ ಅನುಭವಿಗಳಾಗಿದ್ದಾರೆ ಮತ್ತು ಕಾರ್ಯಕರ್ತರು ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಪರಿಪೂರ್ಣರಾಗಿದ್ದಾರೆ. ಅವರು ಪರಸ್ಪರ ಉತ್ತಮ ಸಂಬಂಧ ಹೊಂದಿದ್ದಾರೆ, ಇದು ಕಾರ್ಯವನ್ನು ಅತಿ ಅಚ್ಚುಕಟ್ಟಾಗಿ ಮತ್ತು ಸಾಮರಸ್ಯದಿಂದ ಪೂರ್ಣಗೊಳಿಸಲು ಸಹಾಯಮಾಡುತ್ತದೆ.

ಹಲವು ವಿವಿಧ ತಂಡಗಳು, ನೂತನ ಹುರುಪು ಮತ್ತು ಉತ್ಸಾಹದಿಂದ ಈ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಾಮಾಜಿಕ ಜಾಲತಾಣದ ತಂಡವು ಬೆಳಕಿನ ಚಾನಲಿಂಗ್ ಬಗ್ಗೆ ಅರಿವನ್ನು ಹರಡಲು, ಮಾರ್ಗದರ್ಶಿತ ಆನ್‌ಲೈನ್ ಸೆಷನ್‌ಗಳಿಗೆ ಹೆಚ್ಚು ಜನರನ್ನು ಕೂಡಿಸುವ ಗುರಿ ಇಟ್ಟುಕೊಂಡು, ಸೃಜನಾತ್ಮಕ ರೀತಿಯಲ್ಲಿ ಪ್ರಚಾರ ನಡೆಸಿದರು. ಅವರ ವಿನೂತನ ಮಾದರಿಯ ಪ್ರಚಾರದ ಪರಿಣಾಮವಾಗಿ ನಾವು ಸಾವಿರಾರು ಹೊಸ ಜನರನ್ನು ತಲುಪಲು ಸಾಧ್ಯವಾಯಿತು.

ಪ್ರತಿ ವರ್ಷದಂತೆ, ನಮ್ಮ ಕಾರ್ಯಕರ್ತರು ಯೋಧರಂತೆ ಕಾರ್ಯ ನಿರ್ವಹಿಸಿದರು. ತಮ್ಮ ಕೆಲಸದಲ್ಲಿ ಮತ್ತು ವೈಯಕ್ತಿಕ ಜೀವನಗಳಲ್ಲಿ, ಅವರು ಹಲವಾರು ಸವಾಲುಗಳನ್ನು ಎದುರಿಸಿದರು, ಆದರೆ ಅವರ ಲಕ್ಷ್ಯವನ್ನು ತಮ್ಮ ಗುರಿಯ ಮೇಲೆ ಇಟ್ಟಿದ್ದರು. ಅವರ ಬದ್ಧತೆಯ ಮುಂದೆ ಎಲ್ಲಾ ಸವಾಲುಗಳೂ ಸಣ್ಣದಾಗಿ ಕಂಡವು. ನಿಸ್ವಾರ್ಥ ಬದ್ಧತೆ ಮತ್ತು ಪರಿಶುದ್ಧ ಉದ್ದೇಶವು ಯಾವಾಗಲೂ ಅದ್ಭುತವಾದ ಫಲಿತಾಂಶಗಳನ್ನೇ ತರುತ್ತವೆ. ವಿಶ್ವ ಚಾನೆಲ್ಸ್ ದಿನದಂದು, ನಮ್ಮ ಕಾರ್ಯಕರ್ತರು 1600 ಶಾಲೆಗಳನ್ನು ಭೇಟಿ ಮಾಡಿ, 7.3 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಮತ್ತು ವಯಸ್ಕರಿಗೆ ಬೆಳಕನ್ನು ಚಾನೆಲ್ ಮಾಡಲು ಸಹಾಯ ಮಾಡಿದರು. ಇಂಗ್ಲೀಷ್, ಮರಾಠಿ, ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಆರು ಆನ್‌ಲೈನ್ ಸೆಷನ್‌ಗಳನ್ನು ನಡೆಸಲಾಯಿತು. ಸಾವಿರಾರು ಜನರು ಆನ್‌ಲೈನ್ ಸೆಷನ್‌ಗಳಲ್ಲಿ ಭಾಗಿಯಾದರು. ಬೆಳಕನ್ನು ಚಾನೆಲ್ ಮಾಡಲು, ಹಲವಾರು ಜನರು ಸಣ್ಣ ತಂಡಗಳಲ್ಲಿ ಸೇರಿದರು. ಬೆಳಕನ್ನು ಚಾನೆಲ್ ಮಾಡಿದ ಅನೇಕ ಮಂದಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಹಲವಾರು ಜನ ಅಖಂಡವಾದ ಶಾಂತಿಯ ಅನುಭವ ಪಡೆದರು. ಮತ್ತೆ ಕೆಲವರು ನಿಶ್ಚಲತೆಯನ್ನು ಅನುಭವಿಸಿದೆವು ಎಂದು ಹೇಳಿಕೊಂಡರು. ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಹರಡುವ ಕಾರ್ಯದಲ್ಲಿ ನಾವು ಒಂದು ಹೊಸ ಹಂತವನ್ನು ಪ್ರವೇಶಿಸಿದ್ದೇವೆ ಎಂಬಂತೆ ಕಾಣುತ್ತಿದೆ.

ನಮ್ಮ ಮಾಸ್ಟರ್‌ಗಳ ಅನುಗ್ರಹದಿಂದ 15ನೇ ವಿಶ್ವ ಚಾನಲ್ಸ್ ದಿನವು ಅದ್ಭುತವಾಗಿ ಯಶಸ್ವಿಯಾಗಿದೆ. ಈ ಹಂತದಲ್ಲಿ, ಈ ಸಂಚಲನವನ್ನು ಹರಡುವುದರಲ್ಲಿ ನಮಗೆ ಬೆಂಬಲ ನೀಡಿದ ಎಲ್ಲಾ ಕಾರ್ಯಕರ್ತರು, ಶಿಕ್ಷಕರು, ಶಾಲಾ ಅಧಿಕಾರಿಗಳು ಮತ್ತು ಎಲ್ಲಾ ಬೆಳಕಿನ ಚಾನೆಲ್‌ಗಳ ಬಗ್ಗೆ ನನ್ನ ಹೃದಯವು ಕೃತಜ್ಞತೆಯಿಂದ ತುಂಬಿದೆ. ಜನರ ಭಾಗವಹಿಸುವಿಕೆಯು ನಾವು ಇನ್ನಷ್ಟು ಹೆಚ್ಚು ಉತ್ಸಾಹದಿಂದ ಕೆಲಸ ಮಾಡಲು ನಮ್ಮನ್ನು ಪ್ರೇರೇಪಿಸುತ್ತದೆ.

15ನೇ ವಿಶ್ವ ಚಾನಲ್ಸ್ ದಿನವು ಒಂದು ಮೈಲಿಗಲ್ಲು, ನಮ್ಮ ಗುರಿಯಲ್ಲ. ನಮ್ಮ ನಿಜವಾದ ಗುರಿಯು, ನಮ್ಮ ಋಷಿಗಳು ಈ ಭೂಮಿಯ ಮೇಲೆ ನವಯುಗವನ್ನು ಸ್ಥಾಪಿಸುವುದಕ್ಕೆ, ಬೆಂಬಲ ನೀಡುವುದಾಗಿದೆ. ಈ ಅದ್ಭುತವಾದ ಗುರಿಯನ್ನು ತಲುಪಲು, ನಾವು ಇನ್ನೂ ಅನೇಕ ಸುಂದರವಾದ ಮೈಲಿಗಲ್ಲುಗಳ ಮೂಲಕ ಸಾಗಬೇಕಾಗಿದೆ. ನಾವು ನಮ್ಮ ಗುರಿ ತಲುಪಲು ಎಷ್ಟು ದಶಕಗಳು ಅಥವಾ ಎಷ್ಟು ಜನ್ಮಗಳು ತಗಲುವುದು ಎಂಬುದನ್ನು ಊಹಿಸಲು ಸಾಧ್ಯವಿಲ್ಲದಿದ್ದರೂ, ನಮ್ಮ ಮಾಸ್ಟರ್‌ಗಳು ನಾವು ಗುರಿಯನ್ನು ತಲುಪುವುದು ಖಚಿತ ಎಂಬ ಆಶ್ವಾಸನೆಯನ್ನು ನೀಡಿದ್ದಾರೆ. ಈ ಸುಂದರ ಪಯಣವನ್ನು ನಾವೆಲ್ಲರೂ ಒಟ್ಟಾಗಿ ಸಂಭ್ರಮದಿಂದ ಆಚರಿಸೋಣ. ■

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಅಥವಾ ಆನ್‌ಲೈನ್ ತರಗತಿಗಳ ಪ್ರಾರಂಭದಲ್ಲಿ ಅಥವಾ ಇನ್ನಾವುದೇ ಸಮಯದಲ್ಲಿ ಬೆಳಕನ್ನು ಪ್ರತಿನಿತ್ಯ 3 ರಿಂದ 7 ನಿಮಿಷಗಳ ಕಾಲ ಚಾನಲ್ ಮಾಡಿಸು-ವುದರ ಮೂಲಕ ಲೈಟ್‌ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 6175 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 30.98 ಲಕ್ಷ |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು | 508 |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಮಕ್ಕಳು | 2.21 ಲಕ್ಷ |

**ಮಾರ್ಗದರ್ಶಿತ ಆನ್‌ಲೈನ್ ಲೈಟ್ ಚಾನೆಲಿಂಗ್ ಸೆಷನ್**

ತಿಂಗಳ ಪ್ರತಿ ಮೂರನೇ ಭಾನುವಾರದಂದು ಬೆಳಿಗ್ಗೆ 11ರಿಂದ 11-30ರವರೆಗೆ ನಡೆಯುತ್ತದೆ. ಇದು ಪ್ರತಿಯೊಬ್ಬರಿಗೂ ಲಭ್ಯವಿರುತ್ತದೆ.

ಇದನ್ನು ಈ ಕೆಳಗಿನ ಲಿಂಕ್ ಮೂಲಕ ಪಡೆಯಬಹುದು:




www.lightagemasters.com.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.





# 15ನೇ ವಿಶ್ವ ಚಾನಲ್ಸ್ ದಿನದ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ**

ವಿಶ್ವ ಚಾನೆಲ್ಸ್ ದಿನದಂದು ಬೆಳಗ್ಗೆ 8 ಗಂಟೆಯ ಆನ್‌ಲೈನ್ ಸೆಷನ್‌ಗೆ ನಾನು ಸೇರಿದಾಗ, ಬೆಳಕು ನನ್ನೊಳಗೆ ರಭಸದಿಂದ ಹರಿಯುತ್ತಿರುವಂತೆ ಮತ್ತು ಪ್ರಪಂಚದ ಸುತ್ತಲೂ ಹರಡುತ್ತಿರುವಂತೆ ಅನ್ನಿಸಿತು. ಇಡೀ ಸೆಷನ್‌ನಲ್ಲಿ ನನ್ನಲ್ಲಿ ಶಾಂತಿ ತುಂಬಿತ್ತು.

ರಾತ್ರಿ 9 ಗಂಟೆಯ ಸೆಷನ್‌ನಲ್ಲಿ, ನನ್ನ ಮೂಲಕ ಹೆಚ್ಚು ಬೆಳಕು ಹಾದುಹೋಗಲಿ ಎಂದು ನಾನು ಪ್ರಾರ್ಥಿಸಿದೆ. ಸಂಪೂರ್ಣ ಶರಣಾಗತಿಯಲ್ಲಿ ಕುಳಿತು ನನ್ನನ್ನು ಬೆಳಕಿಗೆ ಅರ್ಪಣೆ ಮಾಡಿಕೊಂಡೆ. ಕೆಲವೇ ಸೆಕೆಂಡುಗಳಲ್ಲಿ, ನನ್ನ ಮೂಲಕ ಹೆಚ್ಚು ಬೆಳಕು ಪ್ರವೇಶಿಸುತ್ತಿದೆ ಮತ್ತು ಹರಿಯುತ್ತಿದೆ ಎಂದು ನನಗೆ ಅನಿಸಿತು, ಮತ್ತು ನಾನು ವಿಸ್ತಾರಗೊಳ್ಳುತ್ತಿದ್ದೇನೆ ಮತ್ತು ಆಲೋಚನಾರಹಿತ ಸ್ಥಿತಿಯನ್ನು ಪ್ರವೇಶಿಸಿದ್ದೇನೆ ಎಂದು ನನಗೆ ಅನಿಸಿತು. ಇನ್ನೂ ಕೆಲವು ಸೆಕೆಂಡುಗಳ ನಂತರ, ನಾನು ಮತ್ತಷ್ಟು ವಿಸ್ತಾರಗೊಳ್ಳುತ್ತಿದ್ದೇನೆ ಮತ್ತು ನನ್ನ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತಿದ್ದೇನೆ ಎಂದು ನನಗೆ ಅನಿಸಿತು. ಆ ಅನುಭವವು ತುಂಬಾ ಆಳವಾಗಿತ್ತು ಮತ್ತು ತೃಪ್ತಿಕರವಾಗಿತ್ತು ಮತ್ತು ನಾನು ಇನ್ನೂ ಆಳವಾಗಿ ಹೋಗಲು ಬಯಸಿದೆ. ನಾನು ನನ್ನನ್ನು ಕಳೆದುಕೊಳ್ಳಬಹುದು ಎಂಬ ಆಲೋಚನೆ ಬಂದಿತು, ಕೆಲವೇ ಸೆಕೆಂಡುಗಳಲ್ಲಿ ನಾನು ನನ್ನ ಸಾಮಾನ್ಯ ಸ್ಥಿತಿಯಲ್ಲಿದ್ದೆ. ಆಗಲೇ ರಾತ್ರಿ 9.30 ಆಗಿತ್ತು! ಇದು ಪದಗಳಿಗೆ ಮೀರಿದ ತೃಪ್ತಿದಾಯಕ ಅನುಭವವಾಗಿತ್ತು.

–ರಾಮಚಂದ್ರ ಕೆ, ಲೈಟ್ ಚಾನೆಲ್


ವಿಶ್ವ ಚಾನೆಲ್ಸ್ ದಿನದಂದು ನಾನು ಬೆಳಗ್ಗೆ 8 ಗಂಟೆಯ ಆನ್‌ಲೈನ್ ಸೆಷನ್‌ಗೆ ಸೇರಿದೆ. ಕೆಲವೇ ಸೆಕೆಂಡುಗಳಲ್ಲಿ ನಾನು ಆಲೋಚನೆಯಿಲ್ಲದ ಸ್ಥಿತಿಯಲ್ಲಿದ್ದೆ ಮತ್ತು ಇಡೀ ಸೆಷನ್‌ನಲ್ಲಿ ನನ್ನೊಳಗೆ ಆಳವಾದ ಶಾಂತಿಯನ್ನು ಅನುಭವಿಸಿದೆ.

ಮತ್ತೆ, ರಾತ್ರಿ 9 ಗಂಟೆಯ ಸೆಷನ್‌ನಲ್ಲಿ, ಬೆಳಕು ನನ್ನ ಮೂಲಕ ಹರಿಯುತ್ತಿರುವಾಗ, ನನಗಾದ ಶಾಂತಿಯ ಮತ್ತು ಅಂತರಾಳದಲ್ಲಿ ಆಳಕ್ಕೆ ಮುಳುಗುವ ಅನುಭವವು ಪದಗಳಿಗೆ ಮೀರಿದೆ. ಸೆಷನ್ ಮುಗಿದ ನಂತರ ನನಗೆ ಅದನ್ನು ನಿಲ್ಲಿಸಿ ಅದರಿಂದ ಹೊರಬರಲು ಇಷ್ಟವಾಗಲಿಲ್ಲ ಮತ್ತು ಅದು ತುಂಬಾ ತೃಪ್ತಿದಾಯಕ ಮತ್ತು ಸಾರ್ಥಕತೆಯ ಅನುಭವವಾಗಿತ್ತು.

–ವೇದಾವತಿ, ಲೈಟ್ ಚಾನೆಲ್

ಅಲ್ಕಾ ಅವರೊಂದಿಗೆ ಲೈಟ್ ಚಾನೆಲಿಂಗ್ ಸೆಷನ್ ಅನ್ನು ನಾನು ನಿಜವಾಗಿಯೂ ಆನಂದಿಸಿದೆ. ನಾನು ಈ ಹಿಂದೆ ಲೈಟ್ ಚಾನೆಲಿಂಗ್ ಮಾಡಿದ್ದರೂ, ಈ ಮಾರ್ಗದರ್ಶಿತ ಸೆಷನ್ ಅದ್ಭುತ ಕಂಪನಗಳನ್ನು ಮತ್ತು ದೈವಿಕ ಶಕ್ತಿಯೊಂದಿಗೆ ಆಳವಾದ ಸಂಪರ್ಕವನ್ನು ಸೃಷ್ಟಿಸಿತು. ನನಗೆ, ಲೈಟ್ ಚಾನೆಲಿಂಗ್ ನನ್ನೊಂದಿಗೆ ಮತ್ತು ಮೂಲದೊಂದಿಗೆ ಸಂಪರ್ಕ ಸಾಧಿಸುವ ಒಂದು ಮಾರ್ಗವಾಗಿದೆ. ಪ್ರತಿ ಸೆಷನ್ ನನಗೆ ಹಗುರವಾದ, ಶಾಂತವಾದ ಮತ್ತು ಸಮಾಧಾನದ ಭಾವನೆಯನ್ನು ನೀಡುತ್ತದೆ. ಗುಣಪಡಿಸುವಲ್ಲಿ ಅದರ ಶಕ್ತಿಯನ್ನು ನಾನು ಅನುಭವಿಸಿದ್ದೇನೆ – ಅದು ನನಗಾಗಿರಲಿ ಅಥವಾ ಇತರರೊಂದಿಗೆ ಸಕಾರಾತ್ಮಕ ಶಕ್ತಿಯನ್ನು ಹಂಚಿಕೊಳ್ಳುತ್ತಿರಲಿ. ಸಾಮರಸ್ಯವನ್ನು ಪುನಃಸ್ಥಾಪಿಸಲು ಮತ್ತು ಸಂಬಂಧಗಳನ್ನು ಬಲಪಡಿಸಲು, ಕೇವಲ ಒಂದೇ ಒಂದು ಸೆಷನ್ ಗಮನಾರ್ಹ ಫಲಿತಾಂಶಗಳನ್ನು ತರಬಲ್ಲದು.

–ಟೀನಾ ನಾಗ್‌ಪಾಲ್, ಲೈಟ್ ಚಾನೆಲ್



**7 ಲಕ್ಷಕ್ಕೂ ಅಧಿಕ ಜನರು 15ನೇ ವಿಶ್ವ ಚಾನಲ್ಸ್ ದಿನವಾದ ಜನವರಿ 31, 2025 ರಂದು ಲೈಟ್ ಚಾನಲ್ ಮಾಡಿದರು.**



ಭಾಗವಹಿಸಿದ ನಿಮ್ಮೆಲ್ಲರಿಗೂ

ಧನ್ಯವಾದಗಳು

ಪ್ರತಿ ತಿಂಗಳ 3ನೇ ಭಾನುವಾರದಂದು ಬೆಳಿಗ್ಗೆ 11 ರಿಂದ 11.30ರ ವರೆಗೆ ನಡೆಯುವ ಮಾರ್ಗದರ್ಶಿತ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ನೇರ ಪ್ರಸಾರ: https://lightagemasters.com

**ನಿಮ್ಮನ್ನೂ ಹೀಲ್ ಮಾಡಿಕೊಳ್ಳಿ, ಪ್ರಪಂಚವನ್ನೂ ಹೀಲ್ ಮಾಡಿ.**

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ